DCFKND/LND/DVRS/4/2023-ADM

I/18196/2024


ಕರ್ನಾಟಕ ಸರ್ಕಾರ
GOVERNMENT OF KARNATAKA

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ,
ಕುಂದಾಪುರ ವಿಭಾಗ, ಕುಂದಾಪುರ

Office of the
Deputy Conservator of Forests
Kundapura Division, Kundapura

ದೂರವಾಣಿ/Phone: (O) : 08254-230349
08254-232720
E-mail: kpurforest@yahoo.com
ಸ್ಥಳ: ಕುಂದಾಪುರ- 576201
Place: Kundapura - 576201


ಕ್ರ.ಬಿ1/ಎಲ್ಎನ್‌ಡಿ(ಡಿ.ಎಂ.ಎನ್) ವಿವ.40/ಎಫ್ಎಲ್‌ಡಿ/2020-21/E-6419 ದಿನಾಂಕ: 2 -02-2024

ಇವರಿಗೆ,

ವಲಯ ಅರಣ್ಯ ಅಧಿಕಾರಿ,
ಶಂಕರನಾರಾಯಣ ವಲಯ,
ಶಂಕರನಾರಾಯಣ.

ವಿಷಯ: ಅರಣ್ಯ (ಸಂರಕ್ಷಣಾ) ಕಾಯಿದೆ 1980ರಂತೆ ವಾರಾಹಿ ಏತ ಯೋಜನೆಗೆ ಬಿಡುಗಡೆಗೊಳಿಸಿದ 15.40ಹೆ. ಅರಣ್ಯ ಭೂಮಿ ಬಿಡುಗಡೆ ಬಾಬ್ತು ಪರ್ಯಾಯವಾಗಿ ಪರಿಹಾರಾತ್ಮಕ ನೆಡುತೋಪು ಬೆಳೆಸಿದ ಕುಂದಾಪುರ ತಾಲೂಕು ಕುಳಂಜೆ ಗ್ರಾಮದ ಸ.ನಂ. 115 ರ 10.00ಹೆ. ಅರಣ್ಯೇತರ ಪ್ರದೇಶವನ್ನು ಸೆಕ್ಷನ್-4ರಡಿ ಅರಣ್ಯವೆಂದು ಘೋಷಿಸುವ ಬಗ್ಗೆ.

ಉಲ್ಲೇಖ: 1) ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ನೀರಾವರಿ ನಿಗಮ ನಿಯಮಿತ, ನಂ.2, ವಾರಾಹಿ ಜಲಾಶಯ ಯೋಜನಾ ವಿಭಾಗ, ಸಿದ್ದಾಪುರ, ಉಡುಪಿ ಜಿಲ್ಲೆ ಇವರ ಪತ್ರ ಸಂಖ್ಯೆ:ಕಾಇಂ/ಕನೀನಿನಿ/ ವಾಜಯೋವಿ-2/ಪಿ.ಬಿ/ವಾರಾಹಿ ಏತ ನೀರಾವರಿ/ಅರಣ್ಯ ಪ್ರದೇಶ /2023-24/1335 ದಿನಾಂಕ: 09-01-2024

2) ಈ ಕಛೇರಿ ಪತ್ರ ಸಂಖ್ಯೆ:ಬಿ1/ಎಲ್ಎನ್‌ಡಿ(ಡಿಎಂಎನ್)/ವಿವ. 95/1994-95/E-9078 ದಿನಾಂಕ: 16-01-2024.

*********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಅರಣ್ಯ (ಸಂರಕ್ಷಣಾ) ಕಾಯಿದೆ 1980ರಂತೆ ವಾರಾಹಿ ಏತ ಯೋಜನೆಗೆ ಬಿಡುಗಡೆಗೊಳಿಸಿದ 15.40ಹೆ. ಅರಣ್ಯ ಭೂಮಿ ಬಿಡುಗಡೆ ಬಾಬ್ತು ಪರ್ಯಾಯವಾಗಿ ಪರಿಹಾರಾತ್ಮಕ ನೆಡುತೋಪು ಬೆಳೆಸಿದ ಕುಂದಾಪುರ ತಾಲೂಕು ಕುಳಂಜೆ ಗ್ರಾಮದ ಸ.ನಂ. 115 ರ 10.00ಹೆ. ಅರಣ್ಯೇತರ ಪ್ರದೇಶವನ್ನು ಪಹಣಿ ಕಾಲಂ.9 ರಲ್ಲಿ ಅರಣ್ಯ ಎಂದು ದಾಖಲಿಸಿ, ಪಹಣಿ ಪತ್ರವನ್ನು ಉಲ್ಲೇಖ (1)ರ ಪತ್ರದಲ್ಲಿ ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ನೀರಾವರಿ ನಿಗಮ ನಿಯಮಿತ, ನಂ.2, ವಾರಾಹಿ ಜಲಾಶಯ ಯೋಜನಾ ವಿಭಾಗ, ಸಿದ್ದಾಪುರ, ಉಡುಪಿ ಜಿಲ್ಲೆ ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಸದ್ರಿ ಪ್ರದೇಶವನ್ನು ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್-4ರಂತೆ 'ಅರಣ್ಯ' ಎಂದು ಉದ್ಘೋಷಿಸುವ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸಲು ಈ ಕಛೇರಿಯ ಉಲ್ಲೇಖ (2)ರ ಪತ್ರದಲ್ಲಿ ತಿಳಿಸಲಾಗಿರುತ್ತದೆ. ಆದರೆ ಸದರಿ ಪ್ರಸ್ತಾವನೆಯನ್ನು ಇದುವರೆಗೂ ಈ ಕಛೇರಿಗೆ ಸಲ್ಲಿಸಿರುವುದಿಲ್ಲ.

ಆದುದರಿಂದ ಪರಿಹಾರಾತ್ಮಕ ನೆಡುತೋಪು ಬೆಳೆಸಿದ ಕುಂದಾಪುರ ತಾಲೂಕು ಕುಳಂಜೆ ಗ್ರಾಮದ ಸ.ನಂ. 115 ರಲ್ಲಿಯ 10.00ಹೆ. ಪ್ರದೇಶಕ್ಕೆ ಕಾರ್ಯಯೋಜನೆ ವಿಭಾಗದಿಂದ ತಿಳಿಸಿದ 22 ದಾಖಲೆಗಳೊಂದಿಗೆ ಸೆಕ್ಷನ್-4 ಪ್ರಸ್ತಾವನೆಯನ್ನು

I/18196/2024

06 ಪ್ರತಿಗಳಲ್ಲಿ ತಯಾರಿಸಿ ಹಾರ್ಡ್ ಹಾಗೂ ಸಾಫ್ಟ್ ಕಾಪಿಯನ್ನು ಈ ಕಛೇರಿಗೆ ಸಲ್ಲಿಸಲು ಹಾಗೂ Catchment Area Treatment Plan (CATP) ಕಾಮಗಾರಿಯ ಕುರಿತಂತೆ ಪ್ರಸ್ತುತ ದರದಂತೆ ಕ್ರಿಯಾಯೋಜನೆಯನ್ನು ತಯಾರಿಸಿ ಈ ಕಛೇರಿಗೆ ಸಲ್ಲಿಸಲು ಮತ್ತೊಮ್ಮೆ ತಿಳಿಸಿದೆ.

Signed by
Ganapathi K
Date: 02-04-2024 12:16:37
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಕುಂದಾಪುರ ವಿಭಾಗ, ಕುಂದಾಪುರ.

ಪ್ರತಿಯನ್ನು ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ನೀರಾವರಿ ನಿಗಮ ನಿಯಮಿತ, ನಂ.02, ವಾರಾಹಿ ಯೋಜನಾ ವಿಭಾಗ, ಸಿದ್ದಾಪುರ, ಉಡುಪಿ ಜಿಲ್ಲೆ – 576229 ಇವರಿಗೆ ಮಾಹಿತಿಗಾಗಿ ಕಳುಹಿಸುತ್ತಾ, ಹಾಸನ ಮತ್ತು ತುಮಕೂರು ವಿಭಾಗದಲ್ಲಿ ಬೆಳೆಸಿದ ಪರಿಹಾರಾತ್ಮಕ ನೆಡುತೋಪು ಪ್ರದೇಶವನ್ನು ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್-4ರಂತೆ 'ಅರಣ್ಯ' ಎಂದು ಉದ್ಘೋಷಿದ ಬಗ್ಗೆ ದಾಖಲೆಗಳನ್ನು ಪಡೆದು ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ.

ಪ್ರತಿಯನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಉ.ಅ.ಸಂ.ರವರ ತಾಂತ್ರಿಕ ಸಹಾಯಕರು, ಕುಂದಾಪುರ ಇವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ